## ಭಲೇ ಬಾಹುಬಲಿ

ಟೀವಿ 5 ಸುದ್ದಿ ವಾಹಿನಿಯ 'ಬಾಹುಬಲಿ' ಇತರ ಕನ್ನಡ ಚಾನೆಲ್‌ಗಳಿಗೆ ಮಾದರಿ ಕಾರ್ಯಕ್ರಮ ಎಂದರೆ ತಪ್ಪಲ್ಲ. ಈಚೆಗೆ ತುಮಕೂರಿನ ಆಟೊ ಚಾಲಕ ಮುಬಾರಕ್ ಅಲಿ ಸಂದರ್ಶನ ಚೆನ್ನಾಗಿತ್ತು. ಅವರ ನಿಸ್ವಾರ್ಥ ಮನದಾಳದ ಮಾತು ಅನುಕರಣೀಯ. ಸಿದ್ಧಗಂಗೆಯ ಶ್ರೀ ಶಿವಕುಮಾರ ಸ್ವಾಮೀಜಿ ಅವರ ನಿಸ್ವಾರ್ಥ ಸೇವೆಯಿಂದ ಪ್ರೇರಣೆಗೊಂಡು ಮುಬಾರಕ್ ಅಲಿ ತಮ್ಮ ಜೀವನವನ್ನು ಸಾರ್ಥಕಗೊಳಿಸಿಕೊಂಡಿದ್ದಾರೆ.

ಸಂದರ್ಶನದ ಉದ್ದಕ್ಕೂ ಮುಬಾರಕ್ ಅಲಿ, ಅಸಹಾಯಕರ, ಅಶಕ್ತ ರೋಗಿಗಳಿಗೆ ಸಹಾಯ ಮಾಡುವುದು ಗೊತ್ತಾಯಿತು. ಕೋಮು ಗಲಭೆಗಳಿಗೆ ಪ್ರಚೋದನೆ ನೀಡುತ್ತಿರುವ ದುಷ್ಟಶಕ್ತಿಗಳು, ರಾಜಕೀಯ ಪ್ರೇರಿತ ವ್ಯಕ್ತಿಗಳ ವಿರುದ್ಧ ಆಕ್ರೋಶದ ಕೋಮು ಸೌಹಾರ್ದ ಮಾತುಗಳು ಜೀವನದಲ್ಲಿ ಸಂಸ್ಕಾರ ಎಷ್ಟು ಮುಖ್ಯ ಎಂಬುದನ್ನು ಹೇಳುತ್ತಿತ್ತು.

—ಶಿವಮೊಗ್ಗ ರಮೇಶ್, ಮೈಸೂರು

## ನೃತ್ಯವೋ ಸರ್ಕಸ್ಸೋ...

ಕಲರ್ಸ್ ಕನ್ನಡದ 'ಡ್ಯಾನ್ಸಿಂಗ್ ಚಾಂಪಿಯನ್' ಕಾರ್ಯಕ್ರಮ ವಾರಾಂತ್ಯದಲ್ಲಿ ಪ್ರಸಾರವಾಗುತ್ತದೆ. ಇಲ್ಲಿನ ನೃತ್ಯಗಾರರಲ್ಲಿ ಬಹುತೇಕರು ಸರ್ಕಸ್ ಮಾಡುವುದೇ ನೃತ್ಯ ಎಂದುಕೊಂಡಂತೆ ಕಾಣಿಸುತ್ತಿದೆ. ಅದು ಡಾನ್ಸ್‌ಗೆ ಶೋಭೆಯಲ್ಲ.

ನೃತ್ಯವನ್ನು ಸರಿದಾರಿಯಲ್ಲಿ ತೆಗೆದುಕೊಂಡು ಹೋಗುವ ಜವಾಬ್ದಾರಿ ತೀರ್ಪುಗಾರರ ಮೇಲೂ ಇದೆ. ವೀಕ್ಷಕರನ್ನು ಮೆಚ್ಚಿಸಲು ಸರ್ಕಸ್ ಮಾಡುವುದು ಅಗತ್ಯವಿಲ್ಲ. ಸಾಂದರ್ಭಿಕ ಸಾಹಸ ಸಹಜವಾಗಿ ಬಂದರೆ ತೊಂದರೆ ಇಲ್ಲ. ಅದೇ ಪ್ರಧಾನ ಆಗಬಾರದು. ಸರ್ಕಸ್ ನೃತ್ಯವಲ್ಲ. ಇರುವುದರಲ್ಲಿ ಚಂದನ–ಅಕ್ಷತಾ ಜೋಡಿಯ ಡಾನ್ಸ್ ಚೆನ್ನಾಗಿದೆ ಎನ್ನಬಹುದು.

—ಸಿ. ಸಿದ್ದರಾಜು ಆಲಕೆರೆ, ಮಂಡ್ಯ

## ಅಪರೂಪದ ಕಲಾವಿದ

ಭಾವೋದ್ವೇಗಕ್ಕೆ ಒಳಗಾಗದೆ, ವೀಕ್ಷಕರನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವ ವಾಹಿನಿ ಕನ್ನಡ 'ಚಂದನ' ಎಂದರೆ ಅತಿಶಯೋಕ್ತಿಯಲ್ಲ. ಪ್ರಸಾರವಾಗುವ ಹಲವು ಕಾರ್ಯಕ್ರಮಗಳಲ್ಲಿ, ಬೆಳಿಗ್ಗೆ ಎಂಟು ಗಂಟೆಗೆ ಪ್ರಸಾರವಾಗುವ ನಮಸ್ಕಾರ ನಮ್ಮ ಕರ್ನಾಟಕವೂ ಒಂದು.

ವಿವಿಧ ಕ್ಷೇತ್ರಗಳ ಸಾಧಕರನ್ನು ಪರಿಚಯಿಸುವ 'ಚಂದನ' ವಾಹಿನಿಯ 'ನಮ್ಮ ಕರ್ನಾಟಕ' ಕಾರ್ಯಕ್ರಮ ನಿಜಕ್ಕೂ ಶ್ಲಾಘನೀಯ. ಬೆಳಿಗ್ಗೆ ಎಂಟಕ್ಕೆ ಪ್ರಸಾರವಾಗುವ ಈ ಕಾರ್ಯಕ್ರಮದಲ್ಲಿ, ಇತ್ತೀಚೆಗೆ 'ಮೈಕ್ರೊ ಗ್ರೈನ್' ಕಲಾವಿದ ಎಂದು ಜನಪ್ರಿಯವಾಗಿರುವ ವೆಂಕಟೇಶ್ ಅವರನ್ನು ಪರಿಚಯಿಸಲಾಯಿತು. ವೆಂಕೋಬ ಹೆಸರಿನಲ್ಲಿ ಅವರು ವ್ಯಂಗ್ಯಚಿತ್ರಗಳ ಮೂಲಕ ಪರಿಚಯ ಆದವರು. ಸ್ನೇಹಿತರ 'ಕಾಳಿನ ಮೇಲೆ ಕಲೆ'ಯ ಸಲಹೆಗೆ ಪ್ರಭಾವಿತರಾಗಿ ಸತತ ಪ್ರಯತ್ನ, ಶ್ರಮದಿಂದ, ವಿಶ್ವದಾಖಲೆ ಮಾಡಿರುವುದು ಹೆಮ್ಮೆಯ ಸಂಗತಿ. ಒಂದು ಕಾಳು ಅಕ್ಕಿಯಲ್ಲಿ 562 ಅಕ್ಷರಗಳನ್ನೂ, ಒಂದು ಎಳ್ಳು ಕಾಳಿನ ಮೇಲೆ 62 ಅಕ್ಷರಗಳನ್ನು ಬರೆಯುವುದು ಸಾಮಾನ್ಯ ಸಾಧನೆಯಲ್ಲ.

—ರಮೇಶ್, ಮೈಸೂರು

ವಾರದ ಪತ್ರ

## ಹದಿನಾಲಕ್ಕು ಮಗು!

ಅಂಬೇಡ್ಕರ್ ಜನ್ಮದಿನದ ಅಂಗವಾಗಿ ದೇಶದೆಲ್ಲೆಡೆ ವೈವಿಧ್ಯದ ಆಚರಣೆಗಳು ನಡೆದವು. ದೂರದರ್ಶನ 'ಚಂದನ' ವಾಹಿನಿ ಕೂಡ ಅಂಬೇಡ್ಕರ್ ಕುರಿತ 'ಥಟ್ ಅಂತ ಹೇಳಿ' ವಿಶೇಷ ಕಾರ್ಯಕ್ರಮ ನಡೆಸಿತು.

ಪದಬಂಧದ ಕ್ಲೂ ಆಗಿ 'ಬಾಬಾ ಸಾಹೇಬರು ..... ಮಗುವಾಗಿ ಹುಟ್ಟಿದರು' ಎಂಬ ವಾಕ್ಯ ನೀಡಲಾಗಿತ್ತು. ಎಲ್ಲರೂ ಮಗುವಾಗಿಯೇ ಹುಟ್ಟುವುದಲ್ಲವೇ? ಬಹುಶಃ ಎಷ್ಟನೇ ಮಗುವಾಗಿ? ಎಂಬುದು ಪ್ರಶ್ನೆಯಾಗಿತ್ತು. ಸ್ಪರ್ಧಿಯೊಬ್ಬರು 'ಹದಿನಾಲ್ಕನೆಯ' ಎಂದು ಸರಿಯಾಗಿ ಉತ್ತರಿಸಿದರು. ಆದರೆ ಪದಬಂಧಕ್ಕೆ ಬೇಕಾಗಿದ್ದು ಐದೇ ಅಕ್ಷರಗಳು. ಸರಿ ಉತ್ತರ 'ಹದಿನಾಲಕ್ಕು' ಎಂದು ನಿರೂಪಕರು ಘೋಷಿಸಿದರು. ಬಾಬಾ ಸಾಹೇಬರು ಹದಿನಾಲಕ್ಕು ಮಗುವಾಗಿ ಹುಟ್ಟಿದ ರಹಸ್ಯ ಬಹಳ ಜನರಿಗೆ ಗೊತ್ತಿರಲಿಕ್ಕಿಲ್ಲ. 'ನೇ' ಎಂಬ ಒಂದು ಅಕ್ಷರವನ್ನು ಕ್ಲೂನಲ್ಲಿಯೇ ಸೇರಿಸಿದ್ದರೆ ಈ ರೀತಿ ಆಗುತ್ತಿರಲಿಲ್ಲ.

ಇನ್ನು ಆ ಕಾರ್ಯಕ್ರಮದಲ್ಲಿ ಖಾಲಿ ಜಾಗ ಪೂರ್ತಿ ಮಾಡಿ ಎಂದು ಕೇಳುವ ಗಾದೆಗಳನ್ನು ಎಲ್ಲಿಂದ ಆಯ್ದುಕೊಳ್ಳುತ್ತಾರೋ ದೇವರೇ ಬಲ್ಲ. ದಯವಿಟ್ಟು ಜನಪ್ರಿಯ ಗಾದೆಗಳನ್ನು ಮಾತ್ರ ಬಳಸಿ ಎಂದು ವಿನಂತಿ.

—ವಾ. ಮುರಳೀಧರ, ತೀರ್ಥಹಳ್ಳಿ

## ಮಾದರಿ ಅತಿಥಿ

ಚಂದನ ವಾಹಿನಿಯ 'ವಾರದ ಅತಿಥಿ' ಕಾರ್ಯಕ್ರಮ ಅಸಾಮಾನ್ಯ ಪ್ರಯತ್ನ. ಅಲ್ಲಿ ಬರುವ ವಿಷಯಪರಿಣಿತರ ಪೂರ್ಣ ಪರಿಚಯ ಅವರ ಮುಖೇನ ತಿಳಿಸುವ ಇಬ್ಬರು ಸಂದರ್ಶಕರ ಪ್ರತಿಭೆ ಮೆಚ್ಚುವಂತಹುದು. ಈ ವಾರ ಬಂದಿದ್ದ ಮಾಲತಿ ಹೊಳ್ಳ ಅವರ ಸಾಧನೆ ಪ್ರತಿಯೊಬ್ಬರಿಗೂ ಮಾದರಿ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ಜಾಡಿಗೆ ಬಿದ್ದ ಮಾತು

ಕಲರ್ಸ್ ಕನ್ನಡದ 'ಲಕ್ಷಣ'ದಲ್ಲಿ ಭೂಪತಿ – ನಕ್ಷತ್ರ ಇವರ ಸಂಭಾಷಣೆಯನ್ನು ಕೇಳಲು ಬೋರ್ ಹೊಡೆಯುತ್ತದೆ. ನಾಯಕನ ಮಾತಿನಲ್ಲಿ ಏಕತಾನತೆ, ಆಕೆಯದ್ದು ಅದೇ ವೇದನೆಯ ತೊಳಲಾಟದ ಮಾತುಗಳು. ಮದುವೆಯ ದಿನ ನಕ್ಷತ್ರಳ ತಂದೆಯನ್ನು ಕೊಲೆ ಮಾಡಲು ಯತ್ನಿಸಿದ ಕೊಲೆಗಾರ ಸಿಕ್ಕಿಬಿದ್ದಿದ್ದರೂ ಗುಟ್ಟು ಹೊರಬೀಳದಿರುವುದು ಆಶ್ಚರ್ಯಕರ. ಬರುಬರುತ್ತಾ ಧಾರಾವಾಹಿಯನ್ನು ನೋಡಬೇಕೆನ್ನುವ ಆಸಕ್ತಿ ಕಡಿಮೆಯಾಗುತ್ತಿದೆ.

—ಟಿ.ಪಿ. ಭೀಮಾರೆಡ್ಡಿ, ದಾವಣಗೆರೆ

## ಕಾಲಕ್ಕೆ ತಕ್ಕಂತೆ ಇರಲಿ

ಕಲರ್ಸ್ ಕನ್ನಡದ 'ಚಿಕ್ಕೆಜಮಾನಿ' ಸ್ವಾತಂತ್ರ್ಯಪೂರ್ವ ಭಾರತದ ಸಾಮಾಜಿಕ ಪಿಡುಗನ್ನು ಹೋಗಲಾಡಿಸಲು ಕ್ರಾಂತಿಕಾರಿ ಹೆಜ್ಜೆಗಳನ್ನಿಟ್ಟ ಬ್ಯಾರಿಸ್ಟರ್ ಅನಿರುದ್ಧ ರಾಯ್ ಚೌದರಿ ಕುಟುಂಬದ ಕಥೆಯನ್ನು ಒಳಗೊಂಡಿದೆ.

ಇಂಗ್ಲೆಂಡ್‌ನಲ್ಲಿ ಬ್ಯಾರಿಸ್ಟರ್ ಪದವಿ ಪಡೆದ ಭೂಮಿಕಾ ತುಳಸಿಪುರಕ್ಕೆ ಆಗಮಿಸುವ ಸನ್ನಿವೇಶದಲ್ಲಿ, ತುಳಸಿಪುರ ತುಳಸಿಪುರ '0' ಕಿಮಿ ಎಂದು ನಮೂದಿಸಿದ್ದು ಕಾಣಿಸುತ್ತದೆ. ಮತ್ತೊಂದು ಸನ್ನಿವೇಶದಲ್ಲಿ ರಸ್ತೆಯ ಉಬ್ಬು (Road Hump) ಕಾಣಿಸುತ್ತದೆ. ಇಲ್ಲಿ ಮೆಟ್ರಿಕ್ ಪದ್ಧತಿಯನ್ನು 1958ರಲ್ಲಿ ಜಾರಿಗೆ ತರಲಾಯಿತು. ನಾಲ್ಕೈದು ದಶಕಗಳ ಹಿಂದೆ ರಸ್ತೆ ಉಬ್ಬುಗಳನ್ನು ನಿರ್ಮಿಸುವುದನ್ನು ಪ್ರಾರಂಭಿಸಲಾಯಿತು.

—ಜಿ. ನಾಗೇಂದ್ರ, ಕಾವೂರು, ಸಂಡೂರು

## ಸುಂದರ ಕಾಣಿಕೆ

'ಅಂಬೇಡ್ಕರ್ ಜಯಂತಿ' ನಿಮಿತ್ತ ಚಂದನದಲ್ಲಿ ಜಬ್ಬಾರ್ ಪಟೇಲ್ ನಿರ್ದೇಶನದ 'ಡಾ. ಬಾಬಾ ಸಾಹೇಬ ಅಂಬೇಡ್ಕರ್' ಸಿನಿಮಾ ಪ್ರಸಾರವಾಯಿತು. ಸಿನಿಮಾದಲ್ಲಿನ ಅಂಬೇಡ್ಕರ್, ಗಾಂಧೀಜಿ, ರಮಾಬಾಯಿ ಪಾತ್ರಗಳು ಆದರ್ಶಪ್ರಾಯವಾಗಿವೆ. ಚಾರಿತ್ರಿಕ ಹೋರಾಟಗಾರರನ್ನು ನೈಜವಾಗಿ ಕಟ್ಟಿಕೊಟ್ಟಿದ್ದಾರೆ. ಗಾಂಧೀಜಿ–ಅಂಬೇಡ್ಕರ್ ಮಾತುಕತೆ ಮತ್ತು ಗಾಂಧೀಜಿ ಉಪವಾಸದ ಸನ್ನಿವೇಶಗಳು ಮನೋಜ್ಞವಾಗಿದ್ದವು. ರಮಾಬಾಯಿ ಸಾವಿನ ಸಂದರ್ಭ ನಿಜಕ್ಕೂ ಕರುಳು ಕಿವುಚುವಂತಿದೆ. ಗಂಭೀರ ಸ್ವಭಾವದ ಅಂಬೇಡ್ಕರ್ ದುಃಖವನ್ನು ತಡೆದುಕೊಳ್ಳಲು ಪ್ರಯತ್ನಿಸಿದಷ್ಟೂ ಕಣ್ಣಲ್ಲಿ ನೀರು ಉಕ್ಕುವ ದೃಶ್ಯ ಮನ ಕಲಕುತ್ತದೆ. ಮಲಯಾಳಂನ ಖ್ಯಾತ ನಟ ಮುಮ್ಮುಟ್ಟಿ ಅಂಬೇಡ್ಕರ್ ಪಾತ್ರವನ್ನು ಸೊಗಸಾಗಿ ಅಭಿನಯಿಸಿದ್ದಾರೆ. ಜಾತೀಯತೆ–ಅಸ್ಪೃಶ್ಯತೆ ನಿರ್ಮೂಲನೆ ಕುರಿತು ಅಂಬೇಡ್ಕರ್ ನಂಬಿದ್ದ ತತ್ವಾದರ್ಶಗಳ ಸಂಘರ್ಷದ ಯಥಾವತ್ ಚಿತ್ರಣ ಸಿನಿಮಾದಲ್ಲಿದೆ.

—ಕೆ.ಪಿ. ರಾಮಗುಂಡಿ, ಬೈಲಹೊಂಗಲ